**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.**

ಸಿಸಿ ನಂಬರ್**1515 /2023**

| | | | |
|---|---|---|---|
| ಸಾಕ್ಷಿಯ ಹೆಸರು | : ಶ್ವೇತ ಬಿ | | ಸಿ.ಡಬ್ಲ್ಯು 4 |
| ಗಂಡನ ಹೆಸರು | : ದಿಲೀಪ್ ಕುಮಾರ್ | | ಪಿ.ಡಬ್ಲ್ಯು 2 |
| ವಯಸ್ಸು | : 35 ವರ್ಷ | | |
| ಉದ್ಯೋಗ | : ಅಬಕಾರಿ ನಿರೀಕ್ಷಕರು,ಚನ್ನಗಿರಿ | | |
| ವಾಸ ಸ್ಥಳ | : ಚನ್ನಗಿರಿ | | |

ದಿನಾಂಕ **11-02-2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2020 ರಿಂದ ಜುಲೈ 24 ನೇ ಸಾಲಿನವರೆಗೆ ತರೀಕೆರೆಯಲ್ಲಿ ಅಬಕಾರಿ ನಿರೀಕ್ಷಕರು ಎಂದು ಕೆಲಸ ಮಾಡಿದ್ದೇನೆ.

ಈ ಪ್ರಕರಣದಲ್ಲಿ ದಿನಾಂಕ 15-03-2023 ರಂದು ಸಂಜೆ 4-30 ರ ಸುಮಾರಿಗೆ ನಾನು ಅಜ್ಜಂಪುರ ನಗರದಲ್ಲಿ ಸಿಬ್ಬಂಧಿಯೊಂದಿಗೆ ಗಸ್ತಿನಲ್ಲಿ ಇದ್ದಾಗ ಅಜ್ಜಂಪುರದಿಂದ ಬೀರೂರು ಕಡೆಗೆ ಹೋಗುವ ಚನ್ನಾಪುರ ಗ್ರಾಮದಲ್ಲಿ ಇರುವ ಖುಷಿ ಡಾಬಾದಲ್ಲಿ ಅಕ್ರಮಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದೆ. ಅದರಂತೆ ನಾನು ನನ್ನ ಜೊತೆ ಇದ್ದ ಸಿಬ್ಬಂಧಿ ಮತ್ತು ಚಾಸಾ-1 ಇವರೊಂದಿಗೆ ಸೇರಿ ಮಾಹಿತಿ ಬಂದ ಸ್ಥಳದ ಕಡೆಗೆ ಹೋದೆನು. ಸದರಿ ಡಾಬಾದ ಅಡಿಗೆ ಕೋಣೆಯನ್ನು ಪರಿಶೀಲಿಸಿದಾಗ ಎರಡು ರಟ್ಟಿನ ಪೆಟ್ಟಿಗೆಗಳಲ್ಲಿ 180 ಎಂ.ಎಲ್ ನ 12 ಓಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಹಾಗೂ 180 ಎಂ.ಎಲ್ ನ 8 ಓಲ್ಡ್ ಮಂಕ್ ರಮ್ಮಿನ ಟೆಟ್ರಾಪ್ಯಾಕೇಟುಗಳು, 180 ಎಂ.ಎಲ್ ನ 5 ಓಲ್ಡ್ ಅಡ್ಮಿರಲ್ ಬ್ರಾಂಡಿ ಟೆಟ್ರಾಪ್ಯಾಕೇಟುಗಳು, 3 ಎಂ.ಸಿ ಬ್ರಾಂಡಿಯ ಟೆಟ್ರಾಪ್ಯಾಕೇಟುಗಳು, 650 ಎಂ.ಎಲ್ ನ ಕೆ.ಎಫ್ ಬಿಯರ್ ಬಾಟಲಿಗಳು ದೊರೆತವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಮಾರಾಟ ಮಾಡಲು ಆರೋಪಿಯ ಬಳಿ ಪರವಾನಗಿ ವಗೈರೆ ಇರಲಿಲ್ಲ. ಸದರಿ ಮದ್ಯವನ್ನು ಚಾಸಾ-1 ರಿಂದ 3 ಇವರ ಸಮಕ್ಷಮ ಸಂಜೆ 5-00 ರಿಂದ 6-00 ಗಂಟೆ ಮದ್ಯದಲ್ಲಿ ಪಂಚನಾಮೆಯನ್ನು ಜರುಗಿಸಿ ಮುದ್ದೆಮಾಲನ್ನು ನನ್ನ ವಶಕ್ಕೆ ಪಡೆದುಕೊಂಡೆನು. ನಂತರ ಆರೋಪಿ ಮತ್ತು ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದು ಸರ್ಕಾರದ ತರ್ಫೆ ನಾನೇ ಪ್ರಕರಣವನ್ನು ದಾಖಲಿಸಿದ್ದೇನೆ. ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಿದ್ದು ಸಹಿಯನ್ನು ನಿ.ಪಿ-1(ಬಿ) ಎಂದು ಗುರುತಿಸಿಕೊಳ್ಳುತ್ತೇನೆ. ದೂರನ್ನು ನಿ.ಪಿ-3 ಎಂದು ಮತ್ತು ಸಹಿಯನ್ನು ನಿ.ಪಿ-3(ಎ) ಎಂದು, ಪ್ರ.ವ.ವರದಿಯನ್ನು ನಿ.ಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-4(ಎ) ಎಂದು ಗುರುತಿಸಿಕೊಳ್ಳುತ್ತೇನೆ. ನ್ಯಾಯಾಲಯದ ಮುಂದಿರುವ ಮದ್ಯವನ್ನು ನೋಡಿ ಗುರುತಿಸಿ ಒಟ್ಟಾಗಿ ಚೀಲದೊಂದಿಗ ಮು.ಮಾ-1 ಎಂದು ಗುರುತಿಸಿಕೊಳ್ಳುತ್ತೇನೆ. ಆರೋಪಿಯನ್ನು

ನೋಡಿದರೆ ಗುರುತಿಸುತ್ತೇನೆ. (ವಕೀಲರು ವಿನಾಯತಿ ಅರ್ಜಿ ಸಲ್ಲಿಸಿದ್ದಾರೆ.) ದಾಳಿಯ ಸಮಯದಲ್ಲಿ ತೆಗೆದ ಪೋಟೊಗಳನ್ನು ನಿ.ಪಿ-5 ಮತ್ತು 6 ಎಂದು ಗುರುತಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:

ನನಗೆ ಮಾಹಿತಿ ಬಂದಾಗ ಅಜ್ಜಂಪುರ ಟೌನ್ ನಲ್ಲಿ ಇದ್ದೆನು. ಮಾಹಿತಿ ಬಂದ ಸ್ಥಳದಿಂದ ನಾನು ಇದ್ದ ಸ್ಥಳ 4-5 ಕಿ.ಮೀ ಅಂತರದಲ್ಲಿ ಇರಬಹುದು. ಮಾಹಿತಿ ಬಂದ ತಕ್ಷಣವೇ ನಾನು ಸ್ಥಳದಿಂದ ಹೊರಟ್ಟಿದ್ದೇನೆ ಮತ್ತು 5-00 ಗಂಟೆ ಸುಮಾರಿಗೆ ಅಲ್ಲಿಗೆ ಹೋಗಿದ್ದೇನೆ. ನನಗೆ ಯಾವುದೇ ಮಾಹಿತಿ ಬಂದಿಲ್ಲ, ನಾನು ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಡಾಬಾದ ಮಾಲೀಕ ಇರುವುದಿಲ್ಲ ಎಂದರೆ ಸರಿ. ಡಾಬಾದ ಮಾಲೀಕತ್ವ ಕುರಿತಂತೆ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ. ಸಾಕ್ಷಿಯು ಆರೋಪಿಯು ಡಾಬಾದ ಮ್ಯಾನೇಜರ್ ಇರುತ್ತಾನೆ ಎಂದು ಹೇಳುತ್ತಾರೆ. ಡಾಬಾದ ಮ್ಯಾನೇಜರ್ ಆರೋಪಿ ಇರುತ್ತಾನೆ ಎಂದು ತೋರಿಸಲು ಐ.ಓ ರವರು ಪರಿಶೀಲನೆ ಮಾಡಿರಬಹುದು. ನನ್ನ ದೂರಿನಲ್ಲಿ ಆರೋಪಿಯನ್ನು ನಾನು ಡಾಬಾದ ಮ್ಯಾನೇಜರ್ ಎಂದು ತೋರಿಸಿಲ್ಲ ಎಂದರೆ ಸರಿ. ನನಗೆ ಡಾಬಾದಲ್ಲಿ ಯಾವುದೇ ಮದ್ಯ ದೊರೆತಿಲ್ಲ, ಅಲ್ಲಿ ಯಾವುದೇ ಅಕ್ರಮ ಮದ್ಯ ಮಾರಾಟ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನಾವು ಹೋದಾಗ ಸ್ಥಳದಲ್ಲಿ ಇರಲಿಲ್ಲ ಮತ್ತು ಆತನು ಡಾಬಾಕ್ಕೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಮತ್ತು ಮದ್ಯವನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ-1 ಕ್ಕೂ ಮತ್ತು ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಇಲಾಖೆಯ ಅಂಕಿಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ:

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್ **/202**

ಸಾಕ್ಷಿಯ ಹೆಸರು : ಸಿ.ಡಬ್ಲ್ಯು
ತಂದೆಯ ಹೆಸರು : ಪಿ.ಡಬ್ಲ್ಯು
ವಯಸ್ಸು : ವರ್ಷ
ಉದ್ಯೋಗ :
ವಾಸ ಸ್ಥಳ :

ದಿನಾಂಕಃ**17-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು 2019 ರಿಂದ 2024 ರವರೆಗೆ

**(**ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**)**

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಮರುವಿಚಾರಣೆ **:** ಇಲ್ಲಃ

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.**)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.